ಓ ಎಸ್ ನಂಃ 546/2022
ಪಿಡಬ್ಲ್ಯೂ.2 (ಮಲಕಾರೆಪ್ಪ)

ದಿನಾಂಕ:27-02-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎನ್ ಎಸ್ ಜಿ ವಕೀಲರಿಂದಃ

ವಾದಿ ಮತ್ತು ಪ್ರತಿವಾದಿಗಳ ನಡುವೆ ನಡೆದ ಕ್ರಯದ ಕರಾರು ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ. ಸದರಿ ಪತ್ರವನ್ನು ಮತ್ತು ನನ್ನ ಸಹಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ 1 ಮತ್ತು 1 ಇ ಎಂದು ಗುರುತಿಸಲಾಗಿದೆ. ನನ್ನೊಂದಿಗೆ ನಿಪಿ 1ಕ್ಕೆ ಶಂಕರ ಮುತ್ತೆಪ್ಪ ವಡೇರ, ಸಿದ್ದಪ್ಪ ಕಳ್ಳಿಗುದ್ದಿ ರವರು ಸಾಕ್ಷಿಗಳಾಗಿ ಸಹಿ ಹಾಕಿರುತ್ತಾರೆ. ಪ್ರತಿವಾದಿ 2 ಮತ್ತು 3 ರವರು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ಉಳಿದ ಪ್ರತಿವಾದಿಗಳು ಸಹಿಯನ್ನು ಹಾಕಿರುತ್ತಾರೆ. ಸಾಕ್ಷಿಯು ಸದರಿ ಸಹಿಗಳನ್ನು ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ನಿಶಾನೆಗಳಾಗಿ ಗುರುತಿಸಲಾಗಿದೆ. ಸಾಕ್ಷಿಯು ನೊಂದಣಾಧಿಕಾರಿ ಕಚೇರಿಯಲ್ಲಿ ಪಕ್ಷಗಾರರನ್ನು ಗುರುತಿಸಿ ಸಹಿ ಹಾಕಿದ್ದೇನೆಂದು ಸದರಿ ಸಹಿಯನ್ನು ಗುರುತಿಸಿರುತ್ತಾರೆ ಸದರಿ ಸಹಿಯನ್ನು ಈಗಾಗಲೇ ನಿಪಿ 1 ಎಸ್ ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ

ಪ್ರತಿವಾದಿಗಳ ಪರ ವಕೀಲರು ಹಾಜರಿದ್ದು, ಪಾಟೀ ಸವಾಲಿಗಾಗಿ ಸಮಯವನ್ನು ಕೋರಿರುತ್ತಾರೆ. ಆದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ

(ಜಿ.ದೀಪಾ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ